ಕುಣಿಗಲ್‌ನಲ್ಲಿ ಖಾಸಗಿ ಬಸ್ಸುಗಳ ಸಮಸ್ಯೆ

177- ಶ್ರೀ ಎಸ್. ಪಿ. ಮುದ್ದಹನುಮೇಗೌಡ (ಕುಣಿಗಲ್) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕುಣಿಗಲ್ ಹಾಗೂ ತುಮಕೂರು ಮಧ್ಯೆ ದಿನಕ್ಕೆ ಎಷ್ಟು ಟ್ರಿಪ್ ಖಾಸಗಿ ಬಸ್‌ಗಳು ಓಡಾಡುತ್ತಿವೆ?*

ಆ) *ಸಮಯದ ಒತ್ತಡದಿಂದ ಬಸ್‌ಗಳು ವೇಗದೂತಗಳಾಗಿ ಪರಿವರ್ತಿಸಿಕೊಂಡು ಬಹಳ ವೇಗದಲ್ಲಿ ಓಡಾಡುತ್ತಿರುವುದರಿಂದ ಹೆಚ್ಚಿನ ಅಪಘಾತಗಳಾಗುತ್ತಿರುವುದಲ್ಲದೆ, ಪ್ರಯಾಣಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?*

ಇ) *ಹಾಗಿದ್ದಲ್ಲಿ, ಇದನ್ನು ನಿಯಂತ್ರಿಸಲು ಕೈಗೊಂಡಿರುವ ಕ್ರಮಗಳೇನು?*

ಶ್ರೀ ಪಿ.ಜಿ.ಆರ್ ಸಿಂಧ್ಯ (ಸಾರಿಗೆ ಸಚಿವರು) :

ಅ) 232 ಟ್ರಿಪ್‌ಗಳು.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ : ಮಾನ್ಯ ಉಪಾಧ್ಯಕ್ಷರೇ, ನನ್ನ ಪ್ರಶ್ನೆಗೆ ಬಹಳ ಕ್ರೂರವಾದಂಥ ಉತ್ತರವನ್ನು ಕೊಟ್ಟಿದ್ದಾರೆ. ನಾನು ಪ್ರಶ್ನೆಯಲ್ಲಿ ಸಮಯದ ಒತ್ತಡದಿಂದ ಬಸ್‌ಗಳು ವೇಗದೂತವಾಗಿ ಪರಿವರ್ತಿಸಿಕೊಂಡು ಬಹಳ ವೇಗದಲ್ಲಿ ಓಡಾಡುತ್ತಿರುವುದರಿಂದ ಹೆಚ್ಚಿನ ಅಪಘಾತಗಳಾಗುತ್ತಿರುವುದಲ್ಲದೆ, ಪ್ರಯಾಣಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ಎಂದು ಕೇಳಿರುವುದಕ್ಕೆ 'ಇಲ್ಲ' ಎಂದು ಉತ್ತರ ಕೊಟ್ಟಿದ್ದಾರೆ. Under Secretary who has signed he has also worked as Assistant Commissioner. Personally he is aware of this problem. ಅವರೂ ಕೂಡ 'ಇಲ್ಲ' ಎನ್ನುವ ಉತ್ತರಕ್ಕೆ ಬಂದಿದ್ದಾರೆಂದರೆ ಹೇಗೆ? ಅಲ್ಲಿ ಪ್ರತಿ ತಿಂಗಳೂ ನಾಲ್ಕೈದು ಅಪಘಾತಗಳು ಆಗುತ್ತಿವೆ. ಕುಣಿಗಲ್‌ನಿಂದ ತುಮಕೂರು ಒಟ್ಟು 40 ಕಿ.ಮೀ. ದೂರವಾಗುತ್ತದೆ. ಈ ವ್ಯಾಪ್ತಿಯಲ್ಲಿ ದಿನಕ್ಕೆ 232ಟ್ರಿಪ್‌ಗಳು ಖಾಸಗಿ ಬಸ್‌ಗಳಿಂದ ಓಡಲ್ಪಡುತ್ತಿವೆ. ಅಲ್ಲಿ ಬಸ್‌ಗಳನ್ನು ಹೆಚ್ಚಿಗೆ ಹಾಕಿ ಎಂದು ನಾನು ಕೇಳುತ್ತಿಲ್ಲ. ಅಲ್ಲಿ ಇನ್ನು ರಾಷ್ಟ್ರೀಕರಣವಾಗದಿರುವುದರಿಂದ ಪ್ರೈವೇಟ್ ಬಸ್‌ಗಳು ಓಡಾಡುತ್ತಿವೆ. ಬಸ್‌ಗಳು ಅಲ್ಲಿ ಸಾಕಷ್ಟಿದೆ. ಅಲ್ಲೇನಾಗಿದೆಯೆಂದರೆ ನೀವು ಖಾಸಗಿ ಬಸ್‌ಗಳಿಗೆ 232 ಟ್ರಿಪ್‌ಗಳನ್ನು ಕೊಟ್ಟು ಬಿಟ್ಟಿದ್ದೀರಿ, ಕುಣಿಗಲ್-ತುಮಕೂರು ಮಧ್ಯೆ ಬರುವ ಒಂದೂ ಹಳ್ಳಿಯಲ್ಲೂ ಈ ಬಸ್‌ಗಳು ನಿಲ್ಲುತ್ತಿಲ್ಲ. ಶೆಟಲ್ ಬಸ್‌ಗಳಲೆಲ್ಲಾ ಎಕ್ಸ್‌ಪ್ರೆಸ್ ಬಸ್‌ಗಳ ಹಾಗೆ ಕನ್‌ವರ್ಟ್ ಆಗಿಬಿಟ್ಟಿವೆ. ಇದಲ್ಲದೇ ಈ ಸಮಯದ ಒತ್ತಡದಿಂದ ಅದನ್ನು ಮೇಕಪ್ ಮಾಡುವ ಸಲುವಾಗಿ ಡ್ರೈವರ್‌ಗಳು ಸಿಕ್ಕಾಪಟ್ಟೆ ರ‍್ಯಾಷ್ ಅಂಡ್ ನೆಗ್ಲಿಜೆಂಟ್ ಡ್ರೈವ್ ಹೈ ಸ್ಪೀಡ್‌ನಲ್ಲಿ ಹೋಗುವುದರಿಂದ ಇದರ ಪರಿಣಾಮವಾಗಿ ಹೆಚ್ಚಿನ ಅಪಘಾತಗಳು ಆಗುತ್ತಿವೆ. ಪ್ರತಿ ತಿಂಗಳೂ ನಾಲ್ಕೈದು ಅಪಘಾತಗಳು ಆಗಿ

ಬಹಳ ಜನರು ಸಾಯುತ್ತಿದ್ದಾರೆ. ಆದರೆ ನೀವು ಉತ್ತರದಲ್ಲಿ 'ಇಲ್ಲ' ವೆಂದು ಹೇಳಬಹುದು, ನಮ್ಮ ಗಮನಕ್ಕೆ ಬಂದಿದೆ ಅದಕ್ಕೆ ಪರಿಹಾರ ಕೊಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ ಎಂದಾದರೂ ಹೇಳಿದ್ದರೆ ಸರಿ ಎನ್ನಬಹುದಿತ್ತು. ಅದನ್ನು ಹೇಳದೆ ನಮ್ಮ ಗಮನಕ್ಕೆ ಬಂದಿಲ್ಲವೆಂದು ಹೇಳುವ ಕ್ರೂರವಾದ ಉತ್ತರ ಕೊಟ್ಟರೆ ಹೇಗೆ? ದಯಮಾಡಿ ನೀವು ಈ ಎಲ್ಲಾ 232 ಟ್ರಿಪ್‌ಗಳನ್ನು ರೆಗ್ಯುಲರೈಸ್ ಮಾಡಿ ಎಲ್ಲಾ ಹಳ್ಳಿಗಳಲ್ಲಿ ಬಸ್ ನಿಲ್ಲುವಂತೆ ಏರ್ಪಾಡು ಮಾಡಿ. ಕುಣಿಗಲ್ ಮತ್ತು ತುಮಕೂರಿನಲ್ಲಿ ನಿಲ್ಲಿಸಿ ಮಧ್ಯೆ ಬರುವ ಹಳ್ಳಿಯಲ್ಲಿ ಏರ್ಪಾಡು ಮಾಡಿ. ಕುಣಿಗಲ್ ಮತ್ತು ತುಮಕೂರಿನಲ್ಲಿ ನಿಲ್ಲಿಸಿ ಮಧ್ಯೆ ಬರುವ ಹಳ್ಳಿಯಲ್ಲಿ ನಿಲ್ಲಿಸದಿದ್ದರೆ ಆ ಜನರಿಗೆ ಏನು ಉತ್ತರ ಹೇಳಬೇಕು. ಇದಕ್ಕೆ ದಯಮಾಡಿ ಆದೇಶ ಕೊಟ್ಟು ಎಲ್ಲಾ ಹಳ್ಳಿಗಳಲ್ಲಿ ಕಡ್ಡಾಯವಾಗಿ ಬಸ್‌ನ್ನು ನಿಲ್ಲಿಸಬೇಕೆಂದು ಮಾಡಿ. ಈ ನಿಟ್ಟಿನಲ್ಲಿ ನೀವು ಅಧಿಕಾರಿಗಳಿಗೆ ಆದೇಶ ಕೊಟ್ಟು ಖಾಸಗಿ ಬಸ್‌ಗಳಿಗೆ ಸೂಚನೆ ಕೊಟ್ಟು ಎಲ್ಲಾ ಹಳ್ಳಿಗಳಲ್ಲಿ ಬಸನ್ನು ನಿಲ್ಲಿಸಲು ತಿಳಿಸುವಂತೆ ಹೇಳಿ, ಏಕೆಂದರೆ ಖಾಸಗಿ ಬಸ್‌ಗಳವರಿಗೆ ಇಷ್ಟು ಹಗುರವಾಗಿ ಬಿಡಬಾರದು.

ಶ್ರೀ ಎಂ. ಸಿ. ನಾಣಯ್ಯ : ಮಾನ್ಯ ಉಪಾಧ್ಯಕ್ಷರೇ, ಅವರು ಸಮಯದ ಒತ್ತಡದಿಂದ ಬಸ್‌ಗಳು ವೇಗದೂತಗಳಾಗಿ ಸಂಚರಿಸಿ ಹೆಚ್ಚು ಅಪಘಾತಗಳಾಗಿ ಜನರಿಗೆ ತೊಂದರೆಯಾಗುತ್ತಿದೆಯೇ ಎಂದಿರುವುದಕ್ಕೆ ನಾವು ಇಲ್ಲ ಎಂದು ಹೇಳಿದ್ದೇವೆ. ಇದನ್ನು ನಾನು ಒಪ್ಪಿಕೊಳ್ಳುತ್ತೇನೆ. ಈ ಬೆಂಗಳೂರು-ತುಮಕೂರು ಮತ್ತು ತುಮಕೂರು ಮತ್ತು ಕುಣಿಗಲ್ ಮಧ್ಯೆ ಈ ಅಪಘಾತಗಳು ಹೆಚ್ಚಾಗುತ್ತಿದೆ. ಇದಕ್ಕೆ ಪರಿಹಾರವನ್ನು ಕಂಡುಹಿಡಿಯಬೇಕಾಗಿದೆ. ಏಕೆಂದರೆ ತುಮಕೂರು ಮತ್ತು ಕುಣಿಗಲ್ ಮಧ್ಯೆ ಒಟ್ಟು 40 ಬಸ್‌ಗಳು 232 ಟ್ರಿಪ್‌ಗಳಲ್ಲಿ ಓಡಾಡುತ್ತಿವೆ. ಮುದ್ದ ಹನುಮೇಗೌಡರು ಏನು ಹೇಳಿದ್ದಾರೆಂದರೆ ಪೈಪೋಟಿ ನಡೆಯುತ್ತಿರುವ ಬಗ್ಗೆ ಮತ್ತು 232 ಟ್ರಿಪ್‌ಗಳನ್ನು ಆ 40 ಬಸ್‌ಗಳು ಮಾಡಬೇಕಾಗಿರುವುದರಿಂದ ಒಂದು ಬಸ್ ಹೊರಡುವುದಕ್ಕೂ ಮತ್ತು ಇನ್ನೊಂದು ಬಸ್ ಹೊರಡುವುದಕ್ಕೂ ನಡುವಿನ ಸಮಯದ ಅಂತರ ಬಹಳ ಕಡಿಮೆ ಎಂದಿದ್ದಾರೆ. ನಾವು ಇದರ ಬಗ್ಗೆ ಈಗಾಗಲೇ ಅಧಿಕಾರಿಗಳ ಜೊತೆ ಮಾತನಾಡಿ ಅಲ್ಲಿರತಕ್ಕಂಥ ಟ್ರಾನ್ಸ್‌ಪೋರ್ಟ್ ಅಧಿಕಾರಿಗಳಿಗೆ ಸೂಚನೆಯನ್ನು ಕೊಡುತ್ತಿದ್ದೇವೆ. ಇದರ ಮೂಲಕ ಟೈಮಿಂಗ್ಸ್ ಬಗ್ಗೆ ರ್‍ಯಾಶನಲೈಸೇಷನ್ ಮಾಡಬೇಕಾಗಿರುವುದು ಒಂದು ಅಂಶವಾಗಿದೆ. ಏಕೆಂದರೆ ಕೆಲವೊಂದು ಕಡೆ ಕೇವಲ ಒಂದು ಬಸ್ ಹೊರಟು ಇನ್ನೂ 5 ನಿಮಿಷ ಅಥವಾ ಹತ್ತು ನಿಮಿಷವಾಗಿರುವುದಿಲ್ಲ ತಕ್ಷಣವೇ ಇನ್ನೊಂದು ಬಸ್ ಹೊರಟಿರಬಹುದು, ಬಹುಶಃ ಇಂಥ ಪರಿಸ್ಥಿತಿ ಎಲ್ಲಾದರೂ ನಿರ್ಮಾಣವಾಗಿದ್ದರೆ ಅದನ್ನು ನಾವು ರ್‍ಯಾಶನಲೈಸ್ ಮಾಡಬೇಕಾಗಿದೆ. ಇನ್ನು ಎರಡನೆಯದಾಗಿ ಅವರು ಗ್ರಾಮಾಂತರ ಪ್ರದೇಶಗಳಲ್ಲಿ ಆ ಬಸ್‌ಗಳು ನಿಲ್ಲುತ್ತಲೇ ಇಲ್ಲವೆಂದಿದ್ದಾರೆ. ನಾವು ಎಲ್ಲಾ ಬಸ್‌ಗಳಿಗೆ ಲೈನನ್ನು ಕೊಟ್ಟು ಇಂಥ ಪ್ರದೇಶಗಳಲ್ಲಿ ನಿಲ್ಲಿಸಲೇಬೇಕು ಎಂದು ಸೂಚನೆ ಕೊಟ್ಟಿರುತ್ತೇವೆ. ಬಹುಶಃ ಅವರು ಅರ್ಜಿ ಹಾಕುವಾಗ ನಾವು ಇಂಥಿಂಥ ಸ್ಥಳಗಳಲ್ಲಿ ನಿಲ್ಲಿಸುತ್ತೇವೆ ಎಂದು ಕೊಟ್ಟಿರುವುದಿಲ್ಲವೆಂದು ಕಾಣುತ್ತದೆ. ಅವರು ಏನು ಮಾಡುತ್ತಾರೆಂದರೆ ಕುಣಿಗಲ್ ಮತ್ತು ತುಮಕೂರು ಎಂದು ಕೊಟ್ಟಿದ್ದಾರೆ. ಆ ಮಧ್ಯೆ ಬರುವ ಗ್ರಾಮಾಂತರ ಪ್ರದೇಶಗಳಲ್ಲಿ ಬಸನ್ನು ನಿಲ್ಲಿಸುವುದಕ್ಕೆ ಸೂಚನೆಯನ್ನು ಕೊಡುವ ಸಲುವಾಗಿ ನಮ್ಮ ಅಧಿಕಾರಿಗಳ ಮುಖಾಂತರ ಅಲ್ಲಿರತಕ್ಕಂಥ ಪ್ರಾದೇಶಿಕ ಸಾರಿಗೆ ಅಧಿಕಾರಿಗೆ ಸೂಚನೆಯನ್ನು ಕೊಡುವ ಕೆಲಸವನ್ನು ಮಾಡುತ್ತೇವೆ. ಇನ್ನು ಮೂರನೆಯದಾಗಿ ಈ ಅಪಘಾತಗಳನ್ನು ತಡೆಯುವುದಕ್ಕಾಗಿ ನಾವು ಏನಾದರೂ ಕ್ರಮವನ್ನು [illegible]

ಈಗಿರತಕ್ಕಂಥ ಪರಿಸ್ಥಿತಿಯಲ್ಲಿ ಬೆಂಗಳೂರಿನಿಂದ ತುಮಕೂರಿನ ವ್ಯಾಪ್ತಿಯಲ್ಲಿ ನೆಲಮಂಗಲದವರೆಗೆ ಈ ಸಮಸ್ಯೆ ಇಲ್ಲ. ಏಕೆಂದರೆ ಅಲ್ಲಿಯವರೆಗೆ ಡಬ್ಬಲ್ ರೋಡ್ ಇದೆ. ಆದರೆ ನೆಲಮಂಗಲದಿಂದ ತುಮಕೂರಿನವರೆಗೆ ಮತ್ತು ತುಮಕೂರಿನಿಂದ ಕುಣಿಗಲ್‌ವರೆಗೆ ಈ ಸಮಸ್ಯೆ ಇದೆ. ಬಹುಶಃ ಇದನ್ನು ಒಂದು ಕಡೆ ಲೋಕೋಪಯೋಗಿ ಇಲಾಖೆ ಮತ್ತು ನ್ಯಾಶನಲ್ ಹೈವೆಯವರಿಬ್ಬರೂ ಸೇರಿಕೊಂಡು ಈ ಕೆಲಸವನ್ನು ಮಾಡಬೇಕಾಗುತ್ತದೆ. ಇದನ್ನು ಚತುರ್ಮುಖ ರಸ್ತೆಯನ್ನಾಗಿ ಮಾಡಬೇಕೆಂದು ಸರ್ಕಾರದ ಗಮನದಲ್ಲಿದೆ. ಇದಕ್ಕೆ ನಾವು ಕೇಂದ್ರ ಸರ್ಕಾರದ ಮೇಲೆ ಒತ್ತಡವನ್ನು ತರುತ್ತೇವೆ. ಅಲ್ಲಿಯವರೆಗೆ ಅಪಘಾತಗಳನ್ನು ತಡೆಯುವ ಸಲುವಾಗಿ ಪೋಲಿಸ್ ಇಲಾಖೆ ಮತ್ತು ಸಾರಿಗೆ ಇಲಾಖೆಗಳೆರಡೂ ಒಟ್ಟಾರೆ ಸೇರಿಕೊಂಡು ಮೊಬೈಲ್ ವೆಹಿಕಲ್ಸ್‌ನ್ನು ಹಾಕಿ ಇದನ್ನು ಮಾನಿಟರ್ ಮಾಡುವುದಕ್ಕಾಗಿ ಕ್ರಮ ಕೈಗೊಳ್ಳಬೇಕೆಂದಿದ್ದೇವೆ. ಈಗ ಸಾರಿಗೆ ಇಲಾಖೆಯವರು ಪೋಲಿಸ್ ಇಲಾಖೆಯವರ ಜೊತೆ ಸಂಪರ್ಕವನ್ನಿಟ್ಟುಕೊಂಡು ಈ ಬೆಂಗಳೂರು, ತುಮಕೂರು ಮತ್ತು ಕುಣಿಗಲ್ ಮಧ್ಯೆ ಬರುವ ಸಾರಿಗೆ ಇಲಾಖೆ ಅಧಿಕಾರಿಗಳು ಮತ್ತು ಪೋಲೀಸ್ ಇಲಾಖೆ ಅಧಿಕಾರಿಗಳು ಆ ವ್ಯಾಪ್ತಿಯಲ್ಲಿ ಆಗುವ ಅಪಘಾತಗಳನ್ನು ತಡೆಯುವ ಸಲುವಾಗಿ ಮತ್ತು ವೇಗದಿಂದ ಓಡುವ ಬಸನ್ನು ನಿಯಂತ್ರಣ ಮಾಡುವ ಸಲುವಾಗಿ ಮತ್ತು ಈ ಟೈಮಿಂಗ್ಸ್‌ನ್ನು ರ್‍ಯಾಶನಲೈಸ್ ಮಾಡುವ ಸಲುವಾಗಿ ಕ್ರಮವನ್ನು ಅವರು ತೆಗೆದುಕೊಳ್ಳುವುದಕ್ಕೆ ನಾವು ಕ್ರಮವನ್ನು ಕೈಗೊಳ್ಳುತ್ತೇವೆ. ಅವರು ಪ್ರಯಾಣಿಕರಿಗೆ ತೊಂದರೆಯಾಗುತ್ತಿದೆಯೇ ಎಂಬುದಕ್ಕೆ ನಾವು ಇಲ್ಲವೆಂದು ಹೇಳಿದ್ದೇವೆ. ಕಳೆದ ಒಂದು ವರ್ಷದಲ್ಲಿ ಆ ಭಾಗದಲ್ಲಿ ಎಷ್ಟು ಅಪಘಾತಗಳಾಗಿವೆ ಎಂಬುದಕ್ಕೆ ನಾನು ಮಾಹಿತಿಯನ್ನು ಕೊಟ್ಟುಬಿಡುತ್ತೇನೆ. 1997ರ ಜನವರಿಯಿಂದ ಡಿಸೆಂಬರ್‌ವರೆಗೆ ತುಮಕೂರು ವ್ಯಾಪ್ತಿಯಲ್ಲಿ 37 ಅಪಘಾತಗಳಾಗಿವೆ. ಇದರಲ್ಲಿ 9 ಜನರು ಸತ್ತಿದ್ದಾರೆ. ಇದು ತುಮಕೂರು ಮತ್ತು ಕುಣಿಗಲ್‌ನಲ್ಲಿ ಓಡುವ ವಾರದ ಟ್ರಿಪ್‌ಗಳಿಗೆ ಸಂಬಂಧಪಟ್ಟ ಹಾಗೆ ಇರುವುದು. ಇನ್ನು ಬಸ್‌ಗಳಿಂದ ಅಪಘಾತಗಳಾಗಿರುವುದು ಒಟ್ಟು 21, ಇದರಲ್ಲಿ ಸತ್ತವರು 6 ಮತ್ತು ಮಾರಕವಲ್ಲದ ಅಪಘಾತಗಳ ಸಂಖ್ಯೆ 15 ಆಗಿದೆ. ನಾವು ಇದನ್ನು ವಾಸ್ತವಿಕವಾಗಿ ಒಪ್ಪಿಕೊಳ್ಳಲೇಬೇಕು. ಆದುದರಿಂದ ಮೇಲೆ ಹೇಳಿದ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುವ ಸಲುವಾಗಿ ನಾವು ಅಧಿಕಾರಿಗಳಿಗೆ ಸೂಚನೆಯನ್ನು ಕೊಡುತ್ತೇವೆ.

ಶ್ರೀ ಎಸ್. ಪಿ. ಮುದ್ದಹನುಮೇಗೌಡ : ಮಾನ್ಯ ಉಪಾಧ್ಯಕ್ಷರೇ, ಇನ್ನೊಂದು ವಿಚಾರವೆಂದರೆ ಅಲ್ಲಿ ಪ್ರತಿ ಬಾರಿ ಆಕ್ಸಿಡೆಂಟ್ ಆದಾಗಲೂ ಅಲ್ಲಿಯ ಹಳ್ಳಿಯವರು ಕಾನೂನನ್ನು ತಮ್ಮ ಕೈಗೆ ತೆಗೆದುಕೊಂಡು ಆ ಬಸ್‌ಗಳನ್ನು ನಿಲ್ಲಿಸಿ ಹಾನಿ ಮಾಡಿ ಬಸ್‌ಗೂ ತೊಂದರೆಯಾಗುವುದಿಲ್ಲದೆ ಸಾರ್ವಜನಿಕರಿಗೂ ಕೂಡ ಇದರಿಂದ ತೊಂದರೆಯಾಗಿ ಅಲ್ಲಿ ಬಸ್‌ಗಳು ಓಡಾಡುತ್ತಿಲ್ಲ. ಇದಲ್ಲದೆ ಆ ಹಳ್ಳಿಯವರೇ ಆಕ್ರಮವಾಗಿ ಅವರೇ 'ಹಂಪ್ಸ್'ಗಳನ್ನು ಹಾಕಿಕೊಂಡಿದ್ದಾರೆ. ಇದರಿಂದ ಬಹಳ ತೊಂದರೆಯಾಗುತ್ತಿರುವುದರಿಂದ ನೀವು ತಕ್ಷಣ ಆದೇಶ ಕೊಟ್ಟು ಪ್ರತಿಯೊಂದು ಬಸ್ ಕೂಡ ಹಳ್ಳಿಗಳಲ್ಲಿ ನಿಲ್ಲಿಸಿಯೇ ಮುಂದಕ್ಕೆ ಹೋಗಬೇಕೆಂದು ಸೂಚನೆ ಕೊಡಬೇಕು.

ಶ್ರೀ ಎಂ. ಸಿ. ನಾಣಯ್ಯ : ಮಾನ್ಯ ಉಪಾಧ್ಯಕ್ಷರೇ, ಇಲ್ಲೇನಾಗಿದೆಯೆಂದರೆ ಈ ಕೆಲಸವನ್ನು ತುಮಕೂರಿನಲ್ಲಿರತಕ್ಕಂಥ ರೀಜನಲ್ ಟ್ರಾನ್ಸ್‌ಪೋರ್ಟ್ ಅಥಾರಿಟಿ ಮಾಡಬೇಕು. ಈ ರೂಟ್ಸ್‌ಗಳನ್ನೆಲ್ಲಾ

ರೀಜನಲ್ ಟ್ರಾನ್ಸ್‌ಪೋರ್ಟ್ ಅಥಾರಿಟಿಯವರೇ ಕೊಡತಕ್ಕಂಥದ್ದು. ಸಮಯವನ್ನು ನಿಗಧಿಪಡಿಸುವುದು ರೀಜನಲ್ ಟ್ರಾನ್ಸ್‌ಪೋರ್ಟ್ ಆಫೀಸರ್. ಇಲ್ಲೇನಾಗಿದೆಯೆಂದರೆ ಕೇಂದ್ರ ಸರ್ಕಾರ ಮೋಟರ್ ವೆಹಿಕಲ್ ಆಕ್ಟ್‌ಗೆ ಒಂದು ತಿದ್ದುಪಡಿಯನ್ನು ಮಾಡಿತು. ಹಾಗೆ ತಿದ್ದುಪಡಿಯನ್ನು ಮಾಡಿಯಾದ ಮೇಲೆ ಲಿಬರಲೈಸೇಷನ್ ಪ್ರಕಾರ ಕೇಳಿದವರಿಗೆಲ್ಲಾ ಬಸನ್ನು ಕೊಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ನಮ್ಮ ಗಮನಕ್ಕೆ ಬಂದಿದೆ. ದುರಾದೃಷ್ಟವಶಾತ್ ಆ ತಿದ್ದುಪಡಿಗೆ ರಾಜ್ಯ ಸರ್ಕಾರ ಯಾವುದೇ ತಿದ್ದುಪಡಿಯನ್ನು ತರುವುದಕ್ಕಾಗುವುದಿಲ್ಲ. ಆ ರೀತಿ ಅವಕಾಶವಿದ್ದರೆ ನಾವೇ ತಿದ್ದುಪಡಿಯನ್ನು ತರುತ್ತಿದ್ದೆವು. ಆದರೆ ಒಂದು ಬಸ್ ಮತ್ತು ಇನ್ನೊಂದು ಬಸ್ ಹೊರಡುವುದಕ್ಕೆ ಕನಿಷ್ಟ 30 ನಿಮಿಷಗಳ ಅಂತರವಿರಬೇಕಾಗುತ್ತದೆ. ಆದರೆ ಸಮಯದ ಅಂತರ ಈಗ ಒಂದು ನಿಮಿಷ ಅಥವಾ ಎರಡು ನಿಮಿಷದಲ್ಲಿಯೇ ಮತ್ತೊಂದು ಬಸ್ ಹೋಗುತ್ತಿರುವುದರಿಂದ ಇಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಏಕೆಂದರೆ 40 ಬಸ್‌ಗಳು 232 ಟ್ರಿಪ್‌ಗಳನ್ನು ಮಾಡುತ್ತಿವೆ. ಇದರ ಬಗ್ಗೆ ನಾವು ಈಗಾಗಲೇ ಅಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟಿದ್ದೇವೆ. ಟ್ರಾನ್ಸ್‌ಪೋರ್ಟ್ ಅಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟು ಸಮಯದ ಅಂತರವನ್ನು ಹೆಚ್ಚು ಮಾಡುವುದಕ್ಕೆ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಬಸ್‌ಗಳನ್ನು ನಿಲ್ಲಿಸುವುದಕ್ಕೆ ನಾವು ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಲಾಲ್‌ಬಾಗಿನಲ್ಲಿ ಗಲೀಜು ಮಾಡುವವರಿಗೆ ದಂಡ.

178 - ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಬ್ಬನ್ ಉದ್ಯಾನವನದಲ್ಲಿ ಗಲೀಜು ಮಾಡುವವರಿಗೆ ದಂಡ ವಿಧಿಸುತ್ತಾರೆ. ಇರುವುದು ಸರ್ಕಾರದ ಗಮನಕ್ಕೆ ಬಂದಿರುವುದೆ?

ಆ) ಅದೇ ರೀತಿ ಲಾಲ್‌ಬಾಗ್‌ನಲ್ಲಿ ಗಿಡಗಳನ್ನು ಹಾಳು ಮಾಡುವವರಿಗೆ ಹಾಗೂ ಗಲೀಜು ಮಾಡುವವರಿಗೆ ದಂಡ ವಿಧಿಸಲಾಗುತ್ತಿದೆಯೇ?

ಶ್ರೀ ಡಿ. ಟಿ. ಜಯಕುಮಾರ್ (ತೋಟಗಾರಿಕೆ ರಾಜ್ಯ ಸಚಿವರು) :

ಅ) ಉಚ್ಚ ನ್ಯಾಯಾಲಯದ ಆದೇಶದ ಮೇರೆಗೆ ಪೊಲೀಸ್ ಕಮೀಷನರ್ ಹೊರಡಿಸಿರುವ ದಿನಾಂಕ 2-6-97 ಪ್ರಕಟಣೆಯನ್ವಯ ಕಬ್ಬನ್ ಉದ್ಯಾನವನದಲ್ಲಿ ಯಾವುದೇ ರೀತಿ ಗಲೀಜು ಮಾಡುವುದು, ಮರದ ರಂಬೆಗಳನ್ನು ಮುರಿಯುವುದು. ಆಟಗಳನ್ನು ಆಡುವುದು ವಾಹನಗಳನ್ನು ಅನಧಿಕೃತವಾದ ಸ್ಥಳಗಳಲ್ಲಿ ನಿಲ್ಲಿಸುವುದನ್ನು ನಿಷೇಧಿಸಲಾಗಿದೆ. ಈ ಪ್ರಕಟಣೆಯನ್ವಯ ತಪ್ಪಿತಸ್ಥರಿಗೆ ದಂಡ ವಿಧಿಸಲು ಅವಕಾಶವಿರುತ್ತದೆ.

ಆ) ಇಲ್ಲ.